ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೨೦

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತನೆಯ ಅಧಿವೇಶನ
## (ಮುಂದುವರೆದ ಉಪವೇಶನ)
## ಗುರುವಾರ, ದಿನಾಂಕ ೧೪ನೇ ಜುಲೈ ೨೦೧೬

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಗೃಹ ಸಚಿವರು

೩. ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು

೪. ನಗರಾಭಿವೃದ್ಧಿ ಹಾಗೂ ಹಜ್ ಸಚಿವರು

೫. ಅಬಕಾರಿ ಸಚಿವರು

---

**ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿಗೆ ಮಂಜೂರಾದ ಮನೆಗಳು**

**ಶ್ರೀ ಬಸವರಾಜ ಪಾಟೀಲ್ ಇಟಗಿ** (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೨೪೬ (೨೦೨೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಮೂರು ವರ್ಷಗಳಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿಗೆ ವಿವಿಧ ಯೋಜನೆ ಅಡಿ ಮಂಜೂರಾದ ಮನೆಗಳೆಷ್ಟು ; (ವಿವರ ನೀಡುವುದು) (Ambedkar, Basava, Vajpayee, SC&ST)

(ಆ) ಎಷ್ಟು ಮನೆಗಳ ನಿರ್ಮಾಣ ಪೂರ್ಣಗೊಂಡಿದೆ ; (ವರ್ಷವಾರು, ಯೋಜನಾವಾರು ವಿವರ ನೀಡುವುದು)

(ಇ) ಪೂರ್ಣಗೊಳ್ಳದ ಮನೆಯಲ್ಲಿ Not-matching ಎಷ್ಟು ; ಯಾವಾಗ ಪೂರ್ಣಗೊಳಿಸುವುದು? (ಪಂಚಾಯತ್‌ವಾರು, ಯೋಜನಾವಾರು ವಿವರ ನೀಡುವುದು)

## ೩೭೧(ಜೆ) ಅಡಿಯಲ್ಲಿ ರಾಜ್ಯದ ಇತರೆ ವಿಭಾಗಗಳಲ್ಲಿ ನೇಮಕಾತಿ ಹಾಗೂ ಮುಂಬಡ್ತಿಗಳ ಶೇ.೮%ರಷ್ಟು ಮೀಸಲಾತಿ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ ) –**

೨೮೭ (೨೪೫೩+೨೪೫೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹೈದರಾಬಾದ್–ಕರ್ನಾಟಕ ಪ್ರದೇಶ (ಕಲಬುರಗಿ ವಿಭಾಗ) ಹೊರತುಪಡಿಸಿ ೩೭೧(ಜೆ) ಅಡಿಯಲ್ಲಿ ರಾಜ್ಯದ ಇತರೆ ವಿಭಾಗಗಳಲ್ಲಿ ೩೭೧(ಜೆ) ಆಶಯ ಪ್ರಕಾರ ನೇಮಕಾತಿ ಹಾಗೂ ಮುಂಬಡ್ತಿಗಳಲ್ಲಿ ಶೇ. ೮% ಮೀಸಲಾತಿ ಕಲ್ಪಿಸಲಾಗಿ ಕಾರ್ಯರೂಪಕ್ಕೆ ತರಲಾಗಿದೆಯೇ ; (ವಿವರ ನೀಡುವುದು)

(ಆ) ಹೈದರಾಬಾದ್–ಕರ್ನಾಟಕ ಪ್ರದೇಶ ಹೊರತುಪಡಿಸಿ ೩೭೧ (ಜೆ) ಅಡಿಯಲ್ಲಿ ರಾಜ್ಯದ ಇತರೆ ವಿಭಾಗಗಳಲ್ಲಿ ೩೭೧ (ಜೆ) ಆಶಯ ಪ್ರಕಾರ ನೇಮಕಾತಿ ಹಾಗೂ ಮುಂಬಡ್ತಿಗಳಲ್ಲಿ ಶೇ. ೮% ಮೀಸಲಾತಿ ಕಲ್ಪಿಸದೆ ಇದ್ದಲ್ಲಿ ಕಾರಣಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಹೈದರಾಬಾದ್–ಕರ್ನಾಟಕ ಪ್ರದೇಶ ಹೊರತುಪಡಿಸಿ ೩೭೧ (ಜೆ) ಅಡಿಯಲ್ಲಿ ರಾಜ್ಯದ ಇತರೆ ವಿಭಾಗಗಳಲ್ಲಿ ೩೭೧ (ಜೆ) ಆಶಯ ಪ್ರಕಾರ ನೇಮಕಾತಿ ಹಾಗೂ ಮುಂಬಡ್ತಿಗಳಲ್ಲಿ ಶೇ. ೮% ಮೀಸಲಾತಿಯಲ್ಲಿ ಗೊಂದಲ ಸೃಷ್ಟಿಯಾಗಿ ನ್ಯಾಯಾಲಯದಲ್ಲಿ ವ್ಯಾಜ್ಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸರ್ಕಾರ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು ಹಾಗೂ ಪ್ರಸ್ತುತ ವ್ಯಾಜ್ಯ ಯಾವ ಹಂತದಲ್ಲಿದೆ ; (ವಿವರ ನೀಡುವುದು)

ಈ) ಸದರಿ ೩೭೧ (ಜೆ) ಅಡಿಯಲ್ಲಿರುವ ಶೇ. ೮% ಮೀಸಲಾತಿ ಗೊಂದಲಗಳನ್ನು ನಿವಾರಣೆ ಮಾಡಲು ಸರ್ಕಾರ ಸಂವಿಧಾನದಲ್ಲಿ ತಿದ್ದುಪಡಿ ತರಲು ಮುಂದಾಗುವುದೇ ; ಇದ್ದರೆ, ತಿದ್ದುಪಡಿ ತರಲು ಕ್ರಮಕೈಗೊಳ್ಳುವುದೇ ; (ವಿವರ ನೀಡುವುದು)

ಉ) ೭೩೧ (ಜೆ) ಕೋಶ ವಿಧಾನಸೌಧ ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದ್ದು, ಸಂವಿಧಾನದ ೩೭೧ (ಜೆ) ಆಶಯಕ್ಕನುಗುಣವಾಗಿ ಮೀಸಲಾತಿಗಳು, ಮುಂಬಡ್ತಿಗಳು ನ್ಯಾಯಯುತವಾಗಿ ತ್ವರಿತವಾಗಿ ಸಿಗುವ ದೃಷ್ಟಿಯಿಂದ ಹೈದರಾಬಾದ್–ಕರ್ನಾಟಕ ಭಾಗದ ಒಬ್ಬ ಹಿರಿಯ ಅಧಿಕಾರಿಯನ್ನು ನೇಮಿಸಿ ಸದರಿ ಕೋಶವನ್ನು ಕಲಬುರಗಿಯಲ್ಲಿ ಸ್ಥಾಪಿಸಲು ಸರ್ಕಾರ ಮುಂದಾಗುವುದೇ ?

## ಗೃಹ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ಬಗ್ಗೆ

**ಶ್ರೀಮತಿ ಪೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೨೮೮ (೨೪೨೨) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗೃಹ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ಡಿ.ವೈ.ಎಸ್.ಪಿ. (ಸಿವಿಲ್)ಗಳ ಸಂಖ್ಯೆ ಎಷ್ಟು ; (ವಿವರದೊಂದಿಗೆ ಮಾಹಿತಿ ನೀಡುವುದು)

(ಆ) ಈ ಅಧಿಕಾರಿಗಳಲ್ಲಿ ಕಳೆದ ಮೂರು ವರ್ಷಗಳಿಂದ ಕಾರ್ಯಕಾರಿ (Executive) ಮತ್ತು ಕಾರ್ಯಕಾರೇತರ (Non-Executive) ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ ಎಷ್ಟು ; (ವಿವರದೊಂದಿಗೆ ಮಾಹಿತಿ ನೀಡುವುದು)

(ಇ) ಇತರೆ ವರ್ಗದ ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ಡಿ.ವೈ.ಎಸ್.ಪಿ. (ಸಿವಿಲ್) ಹಲವಾರು ವರ್ಷಗಳಿಂದ ಕಾರ್ಯಕಾರಿ ಹುದ್ದೆಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಈ ಅಧಿಕಾರಿಗಳನ್ನು ಕಾರ್ಯಕಾರಿ ಹುದ್ದೆಗಳಲ್ಲಿ ಸರ್ಕಾರವು ಕರ್ತವ್ಯಕ್ಕೆ ನೇಮಕ ಮಾಡದಿರಲು ಕಾರಣವೇನು ;

ಈ) ಗೃಹ ಇಲಾಖೆಯಲ್ಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು ; ಇದರಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಮತ್ತು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ?

## ವಸತಿ ಯೋಜನೆಯಡಿ ಬ್ಲಾಕ್ ಆದ ಮನೆಗಳ ವಿವರ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೮೯ (೨೪೨೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ವಿವಿಧ ವಸತಿ ಯೋಜನೆಯಡಿ, ಕಳೆದ ಮೂರು ವರ್ಷಗಳಲ್ಲಿ ವಿವಿಧ ಕಾರಣ ನೀಡಿ ಫೋಟೋ ಆಡಿಟ್ ಮೂಲಕ ಬ್ಲಾಕ್ ಮಾಡಲಾದ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು–ವರ್ಷವಾರು ವಿವರ ನೀಡುವುದು)

(ಆ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಮಿತಿಯು ವಸತಿ ಯೋಜನೆಯ ಗರಿಷ್ಠ ಮಿತಿ ೧೦.೦೦ ಲಕ್ಷಕ್ಕೆ ಏರಿಸುವ ಸಂಬಂಧ ಸಲ್ಲಿಸಿರುವ ಪ್ರಸ್ತಾವನೆ ಯಾವ ಹಂತದಲ್ಲಿದೆ ; ಈ ಬಗ್ಗೆ ಸರ್ಕಾರದ ನಿಲುವೇನು, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಿದೆ ; (ಸಂಪೂರ್ಣ ವಿವರ ಒದಗಿಸುವುದು)

(ಇ) ವಸತಿ ನಿಗಮವು ಆಕ್ಷೇಪಣೆ ಸಲ್ಲಿಸಿದ ಮನೆಗಳಿಗೆ, ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಅನುದಾನ ಬಿಡುಗಡೆಗೆ ದೃಢೀಕರಣ ನೀಡದ ನಂತರವೂ ನಿಗಮದಿಂದ ಹೊಸ–ಹೊಸ ಆಕ್ಷೇಪಣೆ ಸಲ್ಲಿಸಿ, ಅನುದಾನ ತಡೆ ಹಿಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ವಿವರ ನೀಡುವುದು)

## ಚಿನ್ನ–ಬೆಳ್ಳಿ ವರ್ತಕರಿಂದ ತೆರಿಗೆ ವಂಚನೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೨೯೦ (೨೪೦೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಜೆಮ್ಸ್ ಮತ್ತು ಆಭರಣ ಕೈಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ಕಳೆದ ಮೂರು ವರ್ಷಗಳಿಂದ ಬಂದಿರುವ ಆದಾಯವೆಷ್ಟು ;

(ಆ) ತೆರಿಗೆ ವಂಚನೆ ಮಾಡಿರುವವರ ಸಂಖ್ಯೆ ಎಷ್ಟು ಹಾಗೂ ಅವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಇ) ಕಳೆದ ಮೂರು ತಿಂಗಳ ಹಿಂದೆ ಚಿನ್ನ–ಬೆಳ್ಳಿ ವರ್ತಕರು ನಡೆಸಿದ ಮುಷ್ಕರ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಈ ಮುಷ್ಕರದಿಂದ ಸರ್ಕಾರದ ಬೊಕ್ಕಸಕ್ಕೆ ಆದ ನಷ್ಟ ಎಷ್ಟು ?

## ರಾಯಚೂರು ಜಿಲ್ಲೆಯ ಪೊಲೀಸ್ ಸಿಬ್ಬಂದಿಗೆ ವಸತಿಗೃಹ ನಿರ್ಮಿಸುವ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು)** –

೨೯೧ (೨೪೬೬) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿ/ಅಧಿಕಾರಿಗಳಿಗೆ ವಸತಿ ಸೌಲಭ್ಯ ಸರಿಯಾಗಿ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಸಮಸ್ಯೆಯನ್ನು ನಿವಾರಣೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರೆವಿನ್ಯೂ ನಿವೇಶನಕ್ಕೆ ಬದಲಿ ನಿವೇಶನ ನೀಡುವ ಕುರಿತು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ )** –

೨೯೨ (೨೪೭೦) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭೂಸ್ವಾಧೀನ ಕ್ರಮದಿಂದ ರೆವಿನ್ಯೂ ನಿವೇಶನಗಳನ್ನು ಕಳೆದುಕೊಂಡ ನಿವೇಶನದಾರರಿಗೆ ಬದಲಿ ನಿವೇಶನ ನೀಡುತ್ತಿರುವುದು ನಿಜವೇ ;

(ಆ) ಹಾಗಾದರೆ ಇಲ್ಲಿಯವರೆಗೂ ಎಷ್ಟು ಬದಲಿ ನಿವೇಶನ ನೀಡಲಾಗಿದೆ ; ಬಾಕಿ ಇರುವ ಅರ್ಜಿಗಳು ಎಷ್ಟು ; (ಬಡಾವಣೆಗಳವಾರು ಮಾಹಿತಿ ನೀಡುವುದು)

(ಇ) ಬಿ.ಡಿ.ಎ. ರವರು ಎಲ್ಲಾ ದಾಖಲೆಗಳು ಸರಿ ಇದ್ದರೂ ಕೂಡ ನೋಂದಣಿ ಕಾರ್ಡು (Registration Card) ಇಲ್ಲವೆಂದು ಅರ್ಜಿಗಳನ್ನು ವಿಲೇ ಇಡುತ್ತಿರುವುದು ನಿಜವೇ ;

ಈ) ರೆವಿನ್ಯೂ ನಿವೇಶನಕ್ಕೆ ಬದಲಿ ನಿವೇಶನ ಪಡೆಯುವ ಸಂಬಂಧ ನೋಂದಣಿ ಕಾರ್ಡು ಕಡ್ಡಾಯ ಮಾಡಿರುವುದು ಸರಿಯೇ ;

ಉ) ಇದರಿಂದ ರೆವಿನ್ಯೂ ನಿವೇಶನ ಕಳೆದುಕೊಂಡ ಬಡವರಿಗೆ ಯಾವ ರೀತಿ ನ್ಯಾಯ ಒದಗಿಸಲಾಗುವುದು ;

ಊ) ಇದರಲ್ಲಿ ಎಷ್ಟು ಜನ ರೆವಿನ್ಯೂ ನಿವೇಶನಕ್ಕೆ ಬದಲಿ ನಿವೇಶನ ಕೋರಿ ನೋಂದಣಿ ಕಾರ್ಡು (Registration Card) ಸಹಿತ ಅರ್ಜಿ ಸಲ್ಲಿಸಿರುತ್ತಾರೆ ; (ಹೆಸರು, ವಿಳಾಸ, ಸರ್ವೆ ನಂಬರ್‌ಗಳ ಮಾಹಿತಿಯೊಂದಿಗೆ ವಿವರ ನೀಡುವುದು)

ಋ) ಎಷ್ಟು ಜನ ರೆವಿನ್ಯೂ ನಿವೇಶನಕ್ಕೆ ಬದಲಿ ನಿವೇಶನ ಕೋರಿ ನೋಂದಣಿ ಕಾರ್ಡು (Registration Card) ರಹಿತ ಅರ್ಜಿ ಸಲ್ಲಿಸಿರುತ್ತಾರೆ ? (ಹೆಸರು, ವಿಳಾಸ, ಸರ್ವೆ ನಂಬರ್‌ಗಳ ಮಾಹಿತಿಯೊಂದಿಗೆ ವಿವರ ನೀಡುವುದು)

## ಕರ್ನಾಟಕದಲ್ಲಿ ನಕ್ಸಲ್ ಚಟುವಟಿಕೆ ಬಗ್ಗೆ

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೯೩ (೨೪೨೫) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕದಲ್ಲಿ ನಕ್ಸಲ್ ಚಟುವಟಿಕೆಯ ನಿಯಂತ್ರಣಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಆ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಜಿಲ್ಲೆಗಳನ್ನು ನಕ್ಸಲ್ ಪ್ರದೇಶವೆಂದು ಘೋಷಣೆ ಮಾಡಲಾಗಿದೆ ;

(ಇ) ರಾಜ್ಯದಲ್ಲಿ ನಕ್ಸಲ್ ಚಟುವಟಿಕೆಯಲ್ಲಿ ಪ್ರಸ್ತುತ ಎಷ್ಟು ಜನ ಭಾಗಿಯಾಗಿದ್ದಾರೆ, ಈ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ ;

ಈ) ಕಳೆದ ಮೂರು ವರ್ಷಗಳಿಂದ ನಕ್ಸಲ್ ಪೀಡಿತ ಪ್ರದೇಶಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ, ಯಾವ ಯಾವ ಕಾರ್ಯಗಳಿಗೆ ಬಳಸಲಾಗಿದೆ ; (ವಿವರ ನೀಡುವುದು)

ಉ) ಕಳೆದ ಮೂರು ವರ್ಷಗಳಿಂದ ಶರಣಾಗತಿ ಪ್ರಕ್ರಿಯೆಯಲ್ಲಿ ಎಷ್ಟು ಜನರನ್ನು ಹಾಗೂ ಯಾರನ್ನು ಮುಖ್ಯವಾಹಿನಿಗೆ ತರಲಾಗಿದೆ, ಅವರಿಗೆ ಯಾವ ಸವಲತ್ತುಗಳನ್ನು ನೀಡಲಾಗಿದೆ ; ಇನ್ನು ಎಷ್ಟು ಜನರನ್ನು ಕರೆತರುವ ಪ್ರಕ್ರಿಯೆ ಸರ್ಕಾರದ ಮುಂದಿದೆ ;

ಊ) ಸರ್ಕಾರ ನಕ್ಸಲ್ ಕಾರ್ಯಾಚರಣೆ ಬಗ್ಗೆ ಕೈಗೊಳ್ಳಲಾಗುತ್ತಿರುವ ಕ್ರಮಗಳೇನು ?

## ರಾಜ್ಯದಲ್ಲಿ ಸೈನಿಕ ಶಾಲೆಯ ಮಾದರಿಯಲ್ಲಿ ಪೊಲೀಸ್ ಶಾಲೆಗಳನ್ನು ಸ್ಥಾಪಿಸುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೯೪ (೨೪೦೬) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸೈನಿಕ ಶಾಲೆಗಳ ಮಾದರಿಯಲ್ಲಿ ರಾಜ್ಯದಲ್ಲಿ ಪೋಲೀಸ್ ಶಾಲೆಗಳನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ;

(ಆ) ರಾಜ್ಯದಲ್ಲಿ ಪೋಲೀಸ್ ಇಲಾಖೆಯ ಅಧೀನದಲ್ಲೇ ಪೋಲೀಸ್ ಶಾಲೆಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರದ ನಿಲುವೇನು ? (ವಿವರ ನೀಡುವುದು)

## ರಾಜೀವ್‌ಗಾಂಧಿ ವಸತಿ ಯೋಜನೆಯಡಿ ಮಂಜೂರಾದ ಮನೆಗಳು

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೯೫ (೨೩೭೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜೀವ್‌ಗಾಂಧಿ ವಸತಿ ನಿಗಮದಿಂದ "ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ" ಅಡಿ ಎಸ್.ಸಿ.ಪಿ./ಟಿ.ಎಸ್.ಪಿ. ಜನರಿಗೆ ಎಷ್ಟು ಮನೆಗಳನ್ನು ಹಂಚಿಕೆ ಮಾಡಿದೆ ; (ಗ್ರಾಮವಾರು ವಿವರವಾದ ಮಾಹಿತಿ ನೀಡುವುದು)

(ಆ) ಸಾಮಾನ್ಯ ವರ್ಗಕ್ಕೂ ಮನೆಗಳ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಏನು ಕ್ರಮ ಕೈಗೊಳ್ಳಲಾಗಿದೆ ;

(ಇ) ಸಾಮಾನ್ಯ ವರ್ಗಕ್ಕೆ ಯಾವುದಾದರೂ ವಿಶೇಷ ಯೋಜನೆ ರೂಪಿಸಿ, ವಸತಿ ಕಲ್ಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ಯೋಜನೆಯ ವಿವರವಾದ ಮಾಹಿತಿ ನೀಡುವುದು)

## ಬೆಂಗಳೂರು ನಗರದ ಕಸ ವಿಲೇವಾರಿ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ ) (ನಾಮನಿರ್ದೇಶನ ಹೊಂದಿದವರು) –**

೨೯೬ (೨೪೩೮) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ನಗರದಲ್ಲಿ ಘನ ತ್ಯಾಜ್ಯ ವಸ್ತುಗಳ ಸಮರ್ಪಕ ನಿರ್ವಹಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ಕಳೆದ ಹಲವಾರು ವರ್ಷಗಳಿಂದ ಬೆಂಗಳೂರು ನಗರದಲ್ಲಿ ಕಸದಿಂದ ಪರಿಸರ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಘನ ತ್ಯಾಜ್ಯ ವಸ್ತು ಸಂಸ್ಕರಣಾ ಘಟಕಗಳ ನಿರ್ವಹಣೆಗೆ ಪ್ರತಿ ವರ್ಷ ಎಷ್ಟು ಖರ್ಚು ಮಾಡಲಾಗುತ್ತದೆ ;

ಈ) ಕಾಲಕಾಲಕ್ಕೆ ಕಸ ವಿಲೇವಾರಿಯಾಗದೆ, ಪರಿಸರ ಮಾಲಿನ್ಯ ಉಂಟಾಗುತ್ತಿರುವುದನ್ನು ತಡೆಗಟ್ಟಲು ಪಾಲಿಕೆ ವತಿಯಿಂದ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ?

## ಸಿಯಾಚಿನ್‌ನಲ್ಲಿ ವೀರ ಮರಣ ಹೊಂದಿದ ಲ್ಯಾನ್ಸ್ ನಾಯಕ ಹನುಮಂತಪ್ಪ ಕೊಪ್ಪದ ಅವರ ಕುಟುಂಬಕ್ಕೆ ಪರಿಹಾರ

**ಶ್ರೀಮತಿ ತಾರಾ ಅನೂರಾಧ (ನಾಮನಿರ್ದೇಶನ ಹೊಂದಿದವರು) –**

೨೯೭ (೨೩೫೩) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಧಾರವಾಡ ಜಿಲ್ಲೆ, ಕುಂದಗೋಳ ತಾಲ್ಲೂಕಿನ ಬೆಟದೂರಿನ "ಲ್ಯಾನ್ಸ್ ನಾಯಕ" ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಸಿಯಾಚಿನ್‌ನಲ್ಲಿ ವೀರ ಮರಣವನ್ನಪ್ಪಿದ ಅವರ ಕುಟುಂಬಕ್ಕೆ ಸರ್ಕಾರವು ಘೋಷಿಸಿದ್ದ ಪರಿಹಾರಗಳೇನು ; ಸರ್ಕಾರ ಘೋಷಿಸಿದ್ದಂತೆ ಪರಿಹಾರ ಕ್ರಮಗಳನ್ನು ಕೈಗೊಂಡಿದೆಯೇ ; (ಆ ಬಗ್ಗೆ ಸಂಪೂರ್ಣ ವಿವರ ನೀಡುವುದು)

(ಆ) ಅವರ ಪತ್ನಿಯು ದಿವಂಗತರ ಹೆಸರಿನಲ್ಲಿ ಸೈನಿಕ ಶಾಲೆಯೊಂದನ್ನು ಸ್ಥಾಪಿಸಲು ಇಚ್ಛಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಸೈನಿಕ ಶಾಲೆಯನ್ನು ಸ್ಥಾಪಿಸಲು ಅಗತ್ಯ ನೆರವನ್ನು ಸರ್ಕಾರವು ನೀಡುವುದೇ ?

## ಪೊಲೀಸ್ ಸಿಬ್ಬಂದಿಯ ಬೇಡಿಕೆಗಳು

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೯೮ (೨೪೨೬) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪೊಲೀಸ್ ಸಿಬ್ಬಂದಿಯ (ಸಿವಿಲ್, ಕೆಎಸ್ಆರ್‌ಪಿ, ಸಿಎಆರ್, ಡಿಎಆರ್) ಬೇಡಿಕೆಗಳೇನು ; ಎಷ್ಟು ಬೇಡಿಕೆಗಳನ್ನು ಈಡೇರಿಸಲಾಗಿದೆ, ಉಳಿದ ಬೇಡಿಕೆಗಳ ಈಡೇರಿಕೆಯ ಬಗ್ಗೆ ಕೈಗೊಂಡಿರುವ ಕ್ರಮಗಳೇನು ;

(ಆ) ಪೊಲೀಸ್ ಇಲಾಖೆಯಲ್ಲಿದ್ದ ಆರ್ಡರ್ಲಿ ಪದ್ಧತಿಯನ್ನು ರದ್ದುಪಡಿಸಲಾಗಿದೆಯೇ, ಇದಕ್ಕೆ ಸಂಬಂಧಿಸಿದ ಆದೇಶದ ಪ್ರತಿ ಒದಗಿಸುವುದು, ಒಬ್ಬ ಐ.ಪಿ.ಎಸ್. ಅಧಿಕಾರಿಯ ಅಧಿಕೃತ ನಿವಾಸಕ್ಕೆ ಎಷ್ಟು ಜನ ಪೊಲೀಸ್ ಸಿಬ್ಬಂದಿಯನ್ನು ನೀಡಲು ಅವಕಾಶವಿದೆ, ಪೊಲೀಸ್ ಸಿಬ್ಬಂದಿಯನ್ನು ನೀಡುವ ಬದಲು ಅಗತ್ಯ ಬಿದ್ದಲ್ಲಿ, ಈ ವಿಶಿಷ್ಟ ಸೇವೆಗೆ ಗ್ರೂಪ್–ಡಿ ನೌಕರರನ್ನು ಪ್ರತ್ಯೇಕವಾಗಿ ನೇಮಕಾತಿ ಮಾಡಿಕೊಂಡು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಇ) ಎಲ್ಲಾ ಪೊಲೀಸ್ ಸಿಬ್ಬಂದಿಗೆ ಸುಸಜ್ಜಿತವಾದ ವಸತಿ ಗೃಹಗಳು, ಪೊಲೀಸ್ ಕಾಲೋನಿಯಲ್ಲಿ ಶಾಲೆ, ಅಂಗನವಾಡಿ, ನರ್ಸರಿ ಶಾಲೆ, ಮಿಲಿಟರಿ ಸ್ಟೋರ್ಸ್ ಮಾದರಿಯ ಸ್ಟೋರ್ಸ್ (ನ್ಯಾಯಬೆಲೆ ಅಂಗಡಿ) ಇವುಗಳನ್ನು ಒದಗಿಸುವ ಬಗ್ಗೆ ಸಮಗ್ರ ಯೋಜನೆಯನ್ನು ಸಿದ್ಧಪಡಿಸಿ ತ್ವರಿತವಾಗಿ ಜಾರಿಗೆ ತರಲು ಕ್ರಮ ಜರುಗಿಸಲಾಗುವುದೇ ;

ಈ) ಕೆಎಸ್ಆರ್‌ಪಿ, ಸಿಎಆರ್ ಮತ್ತು ಡಿಎಆರ್ ಸಿಬ್ಬಂದಿಗಳು ಕೆಲಸದ ಮೇಲೆ ತೆರಳಿದಾಗ ಹತ್ತಾರು ಘಂಟೆಗಳ ಕಾಲ ವಾಹನದ ಒಳಗೆ ಕುಳಿತಿರಬೇಕಾದ ಸನ್ನಿವೇಶ ಇದ್ದು, ಇವರ ಮನೋವಿಕಾಸಕ್ಕೆ ಪತ್ರಿಕೆಗಳು, ರೇಡಿಯೋ ಇವುಗಳ ವ್ಯವಸ್ಥೆಯನ್ನು ವ್ಯಾನ್ ಒಳಗೆ ಕಲ್ಪಿಸಲು ಕ್ರಮ ಜರುಗಿಸಲಾಗುವುದೇ ?

## ಬೀದರ್ ನಗರದಲ್ಲಿ ಪದೇ ಪದೇ ಕಳ್ಳತನ ಆಗುತ್ತಿರುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೨೯೯ (೨೪೧೨) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಎರಡು ವರ್ಷಗಳಿಂದ ಬೀದರ್ ನಗರದಲ್ಲಿ ದಾಖಲಾಗಿರುವ ಮನೆ ಕಳ್ಳತನ ಮತ್ತು ದರೋಡೆ ಪ್ರಕರಣಗಳ ಸಂಖ್ಯೆ ಎಷ್ಟು ; (ಪ್ರಕರಣವಾರು ವಿವರ ನೀಡುವುದು)

(ಆ) ಈ ಪ್ರಕರಣಗಳಲ್ಲಿ ಸಂಬಂಧಪಟ್ಟಂತೆ ಎಷ್ಟು ಜನರ ಮೇಲೆ ಮೊಕದ್ದಮೆ ದಾಖಲಿಸಲಾಗಿದೆ ; ಎಷ್ಟು ಜನರನ್ನು ಬಂಧಿಸಲಾಗಿದೆ ; (ಪ್ರಕರಣವಾರು ವಿವರ ನೀಡುವುದು)

(ಇ) ಒಂದೇ ಮನೆಯಲ್ಲಿ ಎರಡು ಅಥವಾ ಮೂರು ಬಾರಿ ಕಳ್ಳತನ ಮತ್ತು ದರೋಡೆ ಯತ್ನ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಅಂತಹ ಮನೆಗಳಿಗೆ ಭದ್ರತೆ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ; (ವಿವರ ಒದಗಿಸುವುದು)

ಈ) ಕಳ್ಳತನ ನಡೆದ ಮನೆಯ ಅಕ್ಕಪಕ್ಕದ ಮನೆಯವರನ್ನು ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿಚಾರಣೆ ಮಾಡಲಾಗಿದೆಯೇ, ಯಾವಾಗ ಎಷ್ಟು ಜನರ ವಿಚಾರಣೆ ನಡೆಸಲಾಗಿದೆ ; ನಡೆಸಿದ್ದಲ್ಲಿ, ಸಂಪೂರ್ಣ ವಿವರ ನೀಡುವುದು ?

## ಪೊಲೀಸ್ ಇಲಾಖೆಯ ನಿರ್ಲಕ್ಷ ಕುರಿತು

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೩೦೦ (೨೩೭೮+೨೩೭೯) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಬೇಲಿಕೇರಿಯ ನಿವಾಸಿಯೊಬ್ಬರ ಪುತ್ರಿ ೨೮/೬/೨೦೧೧ರಂದು ಕಾಣೆಯಾದ ಬಗ್ಗೆ ಕುಮಟಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ೫ ವರ್ಷ ಕಳೆದರೂ ಪೊಲೀಸ್ ಇಲಾಖೆಯವರು ಯಾವುದೇ ತನಿಖೆ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಆ) ವೃದ್ಧ ತಂದೆ–ತಾಯಿಗಳು ಮಗಳ ಕುರಿತು ಠಾಣೆಗೆ ಭೇಟಿ ನೀಡಿ ವಿಚಾರಿಸಿದರೆ ಯಾವುದೇ ಸರಿಯಾದ ಉತ್ತರ ನೀಡದೆ ಸಂಬಂಧಿಸಿದವರನ್ನು ವಾಪಸ್ಸು ಕಳುಹಿಸುತ್ತಿರುವ ವಿಷಯ ಸಂಶಯಕ್ಕೆ ಆಸ್ಪದವಾಗಿದ್ದು, ಈ ಬಗ್ಗೆ ಇಲ್ಲಿಯವರೆಗೆ ಆಗಿರುವ ತನಿಖೆಯ ಪ್ರಗತಿ ವರದಿ ನೀಡುವುದು ; ಹಾಗೂ ಯಾವ ಕಾರಣಕ್ಕಾಗಿ ಪೊಲೀಸ್ ಇಲಾಖೆ ವಿಳಂಬ ನೀತಿ ಅನುಸರಿಸುತ್ತಿದೆ ; ಇದಕ್ಕೆ ಯಾರು ಹೊಣೆಗಾರರು ? (ವಿವರ ನೀಡುವುದು)

**ಶ್ರೀನಿವಾಸ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಕಾ.ಸೂ. 1345 ಪ್ರತಿಗಳು 1500 – ಪಿ2